ಪ್ರಬಂಧ

# ಪಾಕಶಾಲಾ ಪ್ರಪಂಚದೊಳಗೆ




**ಮುಸ್ತಾಫ ಕೆ.ಎಚ್**

ಕಲೆ: ಸಂತೋಷ್ ಸಸಿಹಿತ್ಲು




ರಸ್ತೆ ಪ್ರಯಾಣದಲ್ಲಿ ಹೆಚ್ಚಿನವರಿಗೆ ಇಷ್ಟವಾಗುವ ವಿಚಾರವೆಂದರೆ ಪುಟ್ಟ ಮಗುವಿನಂತೆ ಬಸ್ಸು, ಕಾರುಗಳ ಕಿಟಕಿಯ ಪಕ್ಕ ಕುಳಿತು ಗ್ರಾಮ, ನಗರ, ಕೇಡ, ಖರ್ವಡ, ಮಡಂಬ, ಪತ್ತನ, ದ್ರೋಣಮುಖಗಳನ್ನು ನೋಡುತ್ತಾ ಹೋಗುವುದು. ಅಂದರೆ ಚಲಿಸುವ ಊರುಗಳನ್ನು ಕಣ್ಣು ತುಂಬಿಕೊಂಡು ತಾವು ತಲುಪಬೇಕಾದ ಸ್ಥಳವನ್ನು ತಲುಪುವುದು. ಈ ಮಧ್ಯೆ ಚಲಿಸುವ ಗಿಡಗಳು, ಮರಗಳು, ಬಳ್ಳಿಗಳು, ಬಯಲು, ಹೊಲ-ಗದ್ದೆ, ಮನುಷ್ಯ ಮುಖಗಳು, ಕಟ್ಟಡಗಳು, ಅಂಗಡಿಗಳು, ಹೋಟೆಲುಗಳು, ಮದುವೆ ಮಂಟಪಗಳು, ವ್ಯಾಪಾರ ಕೇಂದ್ರಗಳು, ಅವುಗಳ ಮುಂದೆ ನೇತು ಹಾಕಿರುವ ಬೋರ್ಡ್‌ಗಳು ಹೀಗೆ ಪ್ರಯಾಣಿಕನ ಕಣ್ಣಿಗೆ ಕಾಣಿಸಿಯೋ, ಕಣ್ಣು ತಪ್ಪಿಸಿಯೋ ಹೋಗಬಹುದಾದ ಹಲವು ಅಂಶಗಳನ್ನು ಪ್ರಯಾಣದುದ್ದಕ್ಕೂ ಒಂದು ಅನುಭೂತಿಯಾಗಿಯೋ, ಪ್ರಯಾಣದ ಸಮಯವನ್ನು ಕಳೆಯುವ ವಿಷಯವಾಗಿಯೂ ಪರಿವರ್ತಿಸಿಕೊಳ್ಳದಿರಲು ಪ್ರಯಾಣಕರಿಂದ ಸಾಧ್ಯವೇ ಇಲ್ಲ. ಮಾತ್ರವಲ್ಲ ಪ್ರಯಾಣ ಪ್ರವಾಸವೇ ಇರಲಿ, ಸಾಮಾನ್ಯ ಪ್ರಯಾಣವೇ ಇರಲಿ ಹಸಿದಾಗ ಹೋಟೆಲುಗಳ ಕದ ತಟ್ಟುವ, ರುಚಿಯಾದದ್ದನ್ನು ಉಣ್ಣುವ ಆಯ್ಕೆಯು ಪ್ರಯಾಣಿಕನಿಗಿದೆ.

ಕರ್ನಾಟಕದೊಳಗೆ ಹಲವು ಊರುಗಳನ್ನು ನಮ್ಮ ಹೆಮ್ಮೆಯ ಕೆಂಪು ಬಸ್ಸಿನಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ಆ ಬಸ್ಸುಗಳು ನಿಲ್ದಾಣದಲ್ಲಿ ಊಟಕ್ಕೆ ನಿಲ್ಲಿಸುವ ಅನುಭವವನ್ನು ಇಲ್ಲಿ ಹೇಳಲೇಬೇಕು. ಹೆಚ್ಚಿನ ಕೆಂಪು ಬಸ್ಸುಗಳು ಊಟ, ತಿಂಡಿ, ಕಾಫಿಗೆ ಒಂದೋ ಬಸ್ಸು ನಿಲ್ದಾಣ ಅಥವಾ ಸಾರಿಗೆ ಸಂಸ್ಥೆ ಅನುಮತಿಸಿದ ಹೋಟೆಲುಗಳ